ದಿನಾಂಕಃ 06-09-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ** ಪ್ರತಿವಾದಿ ಪರ ವಕೀಲರಿಂದ,

1) ಅಸಲು ದಾವೆ ಸಂಖ್ಯೆ359/2022 ಪ್ರಕರಣದ ಆದೇಶ ಪುಟದ ದೃಡೀಕೃತ ನಕಲನ್ನು ಹಾಜರುಪಡಿಸುತ್ತೇನೆ ಸದರಿ ದಾಖಲೆಯನ್ನು ನಿಶಾನೆ.ಡಿ-01 ಎಂದು ಗುರುತಿಸಲಾಯಿತು.

2) ಅಸಲು ದಾವೆ ಸಂಖ್ಯೆ 359/2022 ಪ್ರಕರಣದ ವಾದ ಪತ್ರದ ದೃಡೀಕೃತ ನಕಲನ್ನು ಹಾಜರುಪಡಿಸುತ್ತೇನೆ ಸದರಿ ದಾಖಲೆಯನ್ನು ನಿಶಾನೆ.ಡಿ-02 ಎಂದು ಗುರುತಿಸಲಾಯಿತು.

3) ಅಸಲು ದಾವೆ ಸಂಖ್ಯೆ 359/2022 ಪ್ರಕರಣದ ದಾವೆಯ ಲಿಖಿತ ತಕರಾರಿನ ದೃಡೀಕೃತ ನಕಲನ್ನು ಹಾಜರುಪಡಿಸುತ್ತೇನೆ ಸದರಿ ದಾಖಲೆಯನ್ನು ನಿಶಾನೆ.ಡಿ-03 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ** ವಾದಿ ಪರ ವಕೀಲರಿಂದ,

1) ನಾನು ಎಂ ಎ ಪದವಿ ವ್ಯಾಸಂಗ ಮಾಡಿರುತ್ತೇನೆ. ವಾದಿಯ ಪರವಾಗಿ 1 ಎಕರೆ ಆಸ್ತಿಗೆ ಸಂಬಂಧಿಸಿದಂತೆ ಕರಾರು ಪತ್ರ ಬರೆದುಕೊಟ್ಟಿರುತ್ತೇನೆ. ವಾದಿಯಿಂದ ರೂ. 8,00,000/- ಹಂತ ಹಂತವಾಗಿ ಸಾಲವಾಗಿ ಪಡೆದುಕೊಂಡಿರುತ್ತೇವೆ. ಆದರೆ, ನಿರ್ದಿಷ್ಟವಾದ ದಿನಾಂಕ ನೆನಪಿರುವುದಿಲ್ಲ. ನಾನು ಒಂದು ದಾಖಲೆಗೆ ಸಹಿ ಮಾಡಬೇಕಾದರೆ ಓದಿ, ತಿಳಿದುಕೊಂಡು ನಂತರ ಸಹಿ ಮಾಡುತ್ತೇನೆ.

2) ದಿನಾಂಕ 01.07.2021 ರಂದು ನನ್ನ ಪರವಾಗಿ ಹಕ್ಕು ಖುಲಾಸೆ ಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸರಿ. ಸದರಿ ಪತ್ರವನ್ನು ನನ್ನ ತಾಯಿ ಮತ್ತು ಸಹೋದರಿಯರು ಬರೆದುಕೊಟ್ಟಿರುತ್ತಾರೆ ಎಂದರೆ ಸರಿ. ಸದರಿ ಹಕ್ಕು ಖುಲಾಸೆ ಪತ್ರವನ್ನು ನನ್ನ ತಾಯಿ ಮತ್ತು ಸಹೋದರಿಯರು ಯಾವುದೇ ಒತ್ತಡಕ್ಕೆ ಒಳಗಾಗದೇ ಬರೆದುಕೊಟ್ಟಿರುತ್ತಾರೆ ಎಂದರೆ ಸರಿ. ಅಸಲು ದಾವೆ ಸಂಖ್ಯೆ359/2022 ರಲ್ಲಿ ವಾದಿ

ಪಕ್ಷಗಾರರಾಗಿರುವುದಿಲ್ಲ. ನಾನು ವಾದಿಗೆ ಮೋಸ ಮಾಡುವ ಉದ್ದೇಶದಿಂದ ಮೇಲ್ಕಂಡ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ದಿನಾಂಕ 20-09-2021 ರಂದು ದಾವಾ ಸ್ವತ್ತನ್ನು ರೂ. 10,80,000/- ಪ್ರತಿಫಲದ ಹಣಕ್ಕಾಗಿ ಮಾರಾಟ ಮಾಡಿರುತ್ತೇನೆ ಎಂದು ಒಪ್ಪಿಕೊಂಡಿರುತ್ತೇನೆ ಎಂದರೆ ಸರಿ. ವಾದಿ ನನಗೆ ಮತ್ತು ಇತರೇ ಪ್ರತಿವಾದಿಗಳಿಗೆ ರೂ. 2,80,000/- ಹಣವನ್ನು ಪಡೆದಕೊಂಡು ಕರಾರು ಪತ್ರದಂತೆ ನೋಂದಣಿ ಕ್ರಯ ಪತ್ರವನ್ನು ಮಾಡಿಕೊಡುವಂತೆ ಕೇಳಿರುತ್ತಾರೆ ಹಣವನ್ನವಾದರು ಕೊಡಿ ಅಥವಾ ಜಮೀನ ಅನ್ನು ಕೊಡಿ ಎಂದು ಕೇಳಿರುತ್ತಾರೆ ಎಂದು ನುಡಿಯುತ್ತಾರೆ. ವಾದಿ ಹಣವನ್ನು ಮರುಪಾವತಿ ಮಾಡುವಂತೆ ಕೇಳಿರುವುದಿಲ್ಲ ಎಂದರೆ ಸರಿ. ಸದರಿ ವಿಷಯವನ್ನು ನನ್ನ ಪ್ರತಿವಾದ ಪತ್ರದಲ್ಲಿ ತಿಳಿಸಿರುವುದಿಲ್ಲ. ವಾದಿ ತನಗೆ ಸೇರಿದ ನಿವೇಶನ ಮತ್ತು ಒಡವೆಗಳನ್ನು ಮಾರಾಟ ಮಾಡಿ ನನಗೆ ಹಣವನ್ನು ನೀಡಿರುತ್ತಾರೆ ಎಂದರ ಸರಿ. ನಾನು ಸುಳ್ಳು ತಕರಾರು ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ ನೋಂದಾಯಿತ ಕ್ರಯ ಪತ್ರವನ್ನು ಬರೆದುಕೊಡುವುದನ್ನು ತಪ್ಪಿಸುವ ಸಲುವಾಗಿ ನಾನು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ